ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ    ದಿನಾಂಕ : DATE : 18/12/19

ಸಂ.ಕ 18/12/19

# ವಿಧಾನಸಭೆ ಸಚಿವಾಲಯ ಶೀಘ್ರವೇ ಕಾಗದರಹಿತ

■ ಕೆಂ.ಕ.ಮೂರ್ತಿ



■ ಪ್ರಾಯೋಗಿಕ ಕಾರ್ಯ ಆರಂಭ

■ 16 ಇಲಾಖೆಗಳಲ್ಲಿ ಆನ್‌ಲೈನ್

■ ಹಿಮಾಚಲ ಪ್ರದೇಶ ಮಾದರಿ

ಬೆಂಗಳೂರು: ಬೆಟ್ಟದಂತಹ ಕಾಗದ ಪತ್ರಗಳ ರಾಶಿಯ ಮೂಲಕ ಅಪಾರ ವೆಚ್ಚಕ್ಕೆ ಕಾರಣವಾಗಿರುವ ವಿಧಾನಸಭೆ ಸಚಿವಾಲಯವನ್ನು ಕಾಗದ ರಹಿತವಾಗಿ ಮಾಡುವ ಪದ್ಧತಿ ಸದ್ದುಗದ್ದಲವಿಲ್ಲದೇ ಜಾರಿಗೆ ಬರುತ್ತಿದೆ.

ಈ ಹಿಂದಿನ ಸರ್ಕಾರದ ಅವಧಿಯಲ್ಲಿಯೇ ಹಿಮಾಚಲ ಪ್ರದೇಶದ ಶಾಸನಸಭೆ ಮಾದರಿಯಲ್ಲಿ ಆನ್‌ಲೈನ್ ವ್ಯವಸ್ಥೆ ತರುವ ಮೂಲಕ ಸಚಿವಾಲಯವನ್ನು ಅದರಲ್ಲಿಯೂ ವಿಶೇಷವಾಗಿ ಅಧಿವೇಶನದ ಕಲಾಪವನ್ನು ಕಾಗದ ರಹಿತ ಮಾಡುವ ಪ್ರಯತ್ನ ನಡೆದಿತ್ತು. ಕಾಗದ ಬಳಕೆಗೆ ಅವಕಾಶವೇ ಇಲ್ಲದ ಹಿಮಾಚಲದ ಮಾದರಿಯನ್ನು ಅಧಿಕಾರಿಗಳ ತಂಡ ಅಧ್ಯಯನ ಮಾಡಿ ಬಂದಿತ್ತು. ಆದರೆ ವ್ಯಾವಹಾರಿಕ ಹಂತದಲ್ಲಿ ಪ್ರಯತ್ನಗಳು ಮುಂದುವರೆಯಲೇ ಇಲ್ಲ. ಈ ನಡುವೆ ನೂತನ ಸ್ಪೀಕರ್ ವಿಶ್ವೇಶ್ವರಹೆಗಡೆ ಕಾಗೇರಿ ಇದಕ್ಕೆ ಚಾಲನೆ ನೀಡಿದ್ದಾರೆ.

ಇದರ ಪರಿಣಾಮ ಸಚಿವಾಲಯ ಆರು ಪ್ರಮುಖ ಇಲಾಖೆಗಳನ್ನು ಆಯ್ದುಕೊಂಡು ಪ್ರಶ್ನೋತ್ತರ ಕಲಾಪದ ಆನ್‌ಲೈನ್ ವ್ಯವಸ್ಥೆ ಬಗ್ಗೆ ಪ್ರಾಯೋಗಿಯ ಕಾರ್ಯ ಆರಂಭಿಸಿದೆ. ಕನ್ನಡ ಮತ್ತು ಸಂಸ್ಕೃತಿ, ಕೃಷಿ, ಗ್ರಾಮೀಣಾಭಿವೃದ್ಧಿ, ಆಡಳಿತ ಮತ್ತು ಸಿಬ್ಬಂದಿ, ಹಣಕಾಸು, ವೈದ್ಯಕೀಯ ಹಾಗೂ ಉನ್ನತ ಶಿಕ್ಷಣ ಇಲಾಖೆಯಲ್ಲಿ ಇದು ಜಾರಿಗೆ ಬರುತ್ತಿದೆ. ಈ ಪದ್ಧತಿಯ ಪ್ರಾಯೋಗಿಕ ಜಾರಿಗಾಗಿಯೇ ಈ ಇಲಾಖೆಗಳಲ್ಲಿ ನೋಡೆಲ್ ಅಧಿಕಾರಿಗಳಿಗೆ ನೇಮಿಸಿಕೊಂಡು ಅವರಿಗೆ ಸೂಕ್ತ ತರಬೇತಿ ನೀಡಲಾಗಿದೆ. ಎರಡನೇ ಹಂತದಲ್ಲಿ ಉಳಿದ ಇಲಾಖೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಈ ಇಲಾಖೆಗಳಿಗೆ 50ನೇ ವಿಧಾನಸಭೆಯ 3–4ನೇ ಅಧಿವೇಶನದ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಆನ್‌ಲೈನ್ ಮೂಲಕ ಕಳುಹಿಸಲಾಗಿದೆ. ಅದಕ್ಕೆ ಉತ್ತರಗಳನ್ನು ಆನ್‌ಲೈನ್ ಮೂಲಕವೇ ತರಿಸಿಕೊಳ್ಳಲಾಗುತ್ತಿದೆ. ಇದಕ್ಕೆ ಅಗತ್ಯವಾದ ತಂತ್ರಾಂಶ ಸಿದ್ಧಪಡಿಸಿ ಬಳಕೆ ಮಾಡಲಾಗಿದೆ. ಲೋಕಸಭೆ ಮಾದರಿಯಲ್ಲಿ ರೂಪಿಸಿರುವ ತಂತ್ರಾಂಶದ ನೆರವನ್ನು ರಾಜ್ಯ ಇ–ಆಡಳಿತ ಇಲಾಖೆ ನೀಡಿದೆ. ವಿಧಾನಸಭೆ ಕಲಾಪದಲ್ಲಿ ಪ್ರಶ್ನೋತ್ತರಕ್ಕೆ ಸಂಬಂಧಿಸಿದಂತೆ ಅಧಿಕ ಪ್ರಮಾಣದ ಕಾಗದದ ಬಳಕೆ ಆಗುತ್ತಿರುವುದರಿಂದ ಮೊದಲು ಪ್ರಶ್ನೋತ್ತರ ವ್ಯವಹಾರವನ್ನೇ ಆಯ್ಕೆ ಮಾಡಿಕೊಳ್ಳಲಾಗಿದೆ. ಮುಂದಿನ ಜನವರಿ ಹೊತ್ತಿಗೆ ಈ ಪ್ರಕ್ರಿಯೆ ಮುಗಿಯಲಿದೆ. ಆದರೆ ಶಾಸನಸಭೆ ಕಲಾಪದ ವ್ಯವಹಾರಗಳು ಶೇ. ನೂರಕ್ಕೆ ನೂರರಷ್ಟು ನಿಖರವಾಗಿ ಇರಬೇಕಾಗಿರುವುದರಿಂದ ಕಾಗದ ರಹಿತ ವ್ಯವಸ್ಥೆಯನ್ನು ಅವಸರದಲ್ಲಿ ಜಾರಿಗೆ ತರುವ ಉದ್ದೇಶವಿಲ್ಲ. ಈ ದಿಸೆಯಲ್ಲಿ ತಂತ್ರಾಂಶ ಬಳಕೆ ಸುಲಲಿತವಾದ ನಂತರವೇ ಜಾರಿಗೆ ಬರಲಿದೆ ಎಂದು ಅಧಿಕಾರಿಗಳು ತಿಳಿಸುತ್ತಾರೆ.

ಪ್ರಶ್ನೋತ್ತರ ನಂತರ ವಿಧೇಯಕಗಳು, ಗಮನ ಸೆಳೆಯುವ ಸೂಚನೆಗಳು, ವಿವಿಧ ಇಲಾಖೆಗಳ ವರದಿಗಳು ಮುಂತಾದ ಮಾಹಿತಿಯನ್ನು ಆನ್‌ಲೈನ್ ಲಭ್ಯತೆಗೆ ಅಳವಡಿಸುವ ಪ್ರಕ್ರಿಯೆ ಆರಂಭ ಆಗಲಿದೆ. ಆದರೆ ಬಜೆಟ್ ಅಧಿವೇಶನದಲ್ಲಿ ಇದು ಜಾರಿಗೆ ಬರುವುದು ಅಸಂಭವ. ಎರಡನೇ ಹಂತದಲ್ಲಿ ಉಳಿದ ಇಲಾಖೆಗಳ ಅಧಿಕಾರಿಗಳಿಗೆ ತರಬೇತಿ ನೀಡಲಾಗುತ್ತದೆ.

ಪ್ರಶ್ನೋತ್ತರ, ಗಮನ ಸೆಳೆಯುವ ಸೂಚನೆಗಳು, ವಿಧೇಯಕಗಳು, ವಿವಿಧ ಸಮಿತಿಯ ವರದಿಗಳು ಸದ್ಯದ ವ್ಯವಸ್ಥೆಯಲ್ಲಿ ಕಾಗದದ ರೂಪದಲ್ಲಿಯೇ ಸಿಗುತ್ತಿದೆ. ಇದಕ್ಕಾಗಿ ಜನರ ತೆರಿಗೆಯ ಭಾರೀ ಹಣ ವೆಚ್ಚ ಆಗುತ್ತಿದೆ. ಇ–ಆಡಳಿತ ಜಾರಿಗೆ ತರಬೇಕು ಎಂದು ಹಲವು ಶಾಸಕರು ಸದನದಲ್ಲಿ ಆಗ್ರಹಿಸಿದ್ದರು. ಆದರೆ ಇನ್ನೂ ಕೆಲವು ಶಾಸಕರು ಹಾಲಿ ಪದ್ಧತಿ ಬದಲಾವಣೆಗೆ ಒಲವು ತೋರಿಲ್ಲ ಎಂದು ಮೂಲಗಳು ತಿಳಿಸಿವೆ.